ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

Reg-No6/2020

ದಿನಾಂಕ:05-12-2020

# ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:05-12-2020 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾಗಿದ್ದವರ ವಿವರಗಳು:</u>

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಡಾ॥ಸುರೇಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ಎಸ್.ವೆಂಕಟೇಶ್ | ಕಾರ್ಯದರ್ಶಿ |
| 3 | ಶ್ರೀ.ಎಂ.ದೇವರಾಜ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ರಘುನಂದನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ರವಿಚಂದ್ರನ್ | ಸಹಾಯಕ ಅಭಿಯಂತರರು ಬೃಹತ್ ರಸ್ತೆಗಳು |
| 6 | ಶ್ರೀ.ಜಿ.ಎನ.ವೆಂಕಟೇಶ್ | ಅದ್ಯಕ್ಷಕರು, ಎ.ಇ.ಸಿ.ಎಸ್ ಬಡಾವಣೆ |
| 7 | ಶ್ರೀ. ವೆಂಕಟೇಶ್ | ಕಾರ್ಯದರ್ಶಿ, ಎ.ಇ.ಸಿ.ಎಸ್ ಬಡಾವಣೆ |
| 8 | ಶ್ರೀ.ಸುಂದರ್ | ಕಾರ್ಯದರ್ಶಿಗಳು, ಎಇಸಿಎಸ್ ಬಡಾವಣೆ |
| 9 | ಶ್ರೀ.ಚಂದ್ರಾ ರೆಡ್ಡಿ | ಕುಂದಲಹಳ್ಳಿ ಕಾಲೋನಿ |
| 10 | ಶ್ರೀ.ಜಗದೀಶ್ | ಬಿಬಿಎಂಪಿ,ವಿದ್ಯುತ್ ಶಾಖೆ |
| 11 | ಶ್ರೀ.ರವೀಂದ್ರ | BWSSB |
| 12 | ಶ್ರೀ.ಪ್ರಮೀಳ | ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡ್ಡನೆಕ್ಕುಂದಿ. |
| 13 | ಶ್ರೀ.ಸಂಜಯ್.ಎಸ್ | ಸಹಾಯಕ ಅಭಿಯಂತರರು(ವಿದ್ಯುತ್), ಬಿಬಿಎಂಪಿ, |
| 14 | ಶ್ರೀ.ಸಿ.ಡಿ.ವೆಂಕಟೇಶ್ | ಸಹಾಯಕ ಅಭಿಯಂತರರು, ವಾರ್ಡ್ ನಂ.85, ಬೆಸ್ಕಾಂ |
| 15 | ಶ್ರೀ.ಶ್ರೀನಿವಾಸ್ | ಎ.ಎಫ್.ಓ ಕಛೇರಿ, |

Scanned with CamScanner

| | | |
|---|---|---|
| 16 | ಎ.ಎಂ.ರೆಡ್ಡಿ | ಎ.ಇ.ಸಿ.ಎಸ್. ಬಡಾವಣೆ |
| 17 | ಸಿ.ಟಿ.ಮಲ್ಲೇಶ್ | ಎ.ಇ.ಸಿ.ಎಸ್. ಬಡಾವಣೆ |
| 18 | ಶಿವಶಂಕರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ |
| 19 | ಈಶ್ವರ್ | ಜಂಟಿ ಕಾರ್ಯದರ್ಶಿ ಎ.ಇ.ಸಿ.ಎಸ್ ಬಡಾವಣೆ |
| 20 | ವಿಕಾಸ್ | ವಾಡ್ ನಂ.85, ಮಾರ್ಷಲ್ |

ಶ್ರೀ.ಎಂ.ದೇವರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ.ಡಾ||ಸುರೇಶ್.ಆರ್., ಶ್ರೀ.ಎನ್.ವೆಂಕಟೇಶ್, ಕಾರ್ಯದರ್ಶಿ, ಬಡಾವಣೆಯ ಸಂಘ ಸಂಸ್ಥೆರವರು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಸಭೆಯಲ್ಲಿ ದಿನಾಂಕ:21-11-2020 ರಂದು ನಡೆದ ನಡುವಳಿಗಳನ್ನು ಅಧ್ಯಕ್ಷಕರು ಹಾಗೂ ನೋಡಲ್ ಅಧಿಕಾರಿ ಡಾ||ಸುರೇಶ್ ರವರು ವಿವರಿಸಿದರು.
2. ಸಭೆಯಲ್ಲಿ ಶ್ರೀ.ಚಂದ್ರಾರೆಡ್ಡಿ, ರವರು ಕುಂದಲಹಳ್ಳಿ ಕಾಲೋನಿಯಲ್ಲಿ ಈಗಾಗಲೇ ಗೇಲ್ ಗ್ಯಾಸ್ ಗುತ್ತಿಗೆದಾರರಿಂದ ರಸ್ತೆ ಅಗೆತದ ಪುನರ್ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳಲು ಕೋರಿರುವ ಹಿನ್ನೆಲೆಯಲ್ಲಿ ಸಹಾಯಕ ಅಭಿಯಂತರರು, ಎನ್.ವೆಂಕಟೇಶ್ ರವರು ಸದರಿ ವಿಷಯದ ಬಗ್ಗೆ ಗೇಲ್‌ಗ್ಯಾಸ್ ಗುತ್ತಿಗೆದಾರರ ಮುಖ್ಯಸ್ಥರ ಪರವಾಗಿ ಇಂದ್ರಜಿತ್ ಮೀನಾ ರವರು 10ದಿನಗಳ ಗಡುವನ್ನು ಕೋರಿರುತ್ತಾರೆ ಎಂದು ತಿಳಿಸಿದರು.
3. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಎಇ.ಸಿ.ಎಸ್.ಬಡಾವಣೆಯ ವಿದ್ಯುತ್ ಕಂಬಗಳನ್ನು ರಸ್ತೆಯ ಬದಿಗೆ ಸ್ಥಳಾಂತರಿಸಲು ದಿನಾಂಕವನ್ನು ಕೋರಿದರು. ಸದರಿ ವಿಷಯಕ್ಕೆ ಶ್ರೀ.ವೆಂಕಟೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ ರವರು ಸದರಿ ವಿಷಯದ ಕಡತವು ಮೇಲಾಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸಿದ್ದು, ಅತೀ ಶೀಘ್ರದಲ್ಲೇ ಅನುಮೋದನೆ ಪಡೆದು 60 ಅಡಿ ರಸ್ತೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ತಿಳಿಸಿದರು.
4. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಕಾಮಗಾರಿಯು ಪ್ರಾರಂಭವಾದ ಹಿನ್ನೆಯಲೆಯಲ್ಲಿ ಮೊದಲು ಚರಂಡಿಯಲ್ಲಿ ಹೂಳನ್ನು ತೆಗೆಯುವ ಬಗ್ಗೆ ಅಧ್ಯತೆ ವಹಿಸಬೇಕೆಂದು ಮಾನ್ಯ ಅಧ್ಯಕ್ಷರರು ಶ್ರೀ.ಡಾ||ಸುರೇಶ್ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಅಭಿಯಂತರರು, ಎನ್.ವೆಂಕಟೇಶ್ ರವರು ಒಪ್ಪಿಗೆ ನೀಡಿದರು.
5. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಆಟದ ಪಿಠೋಪಕರಣಗಳನ್ನು ಅತೀ ಶೀಘ್ರವಾಗಿ ಮೈದಾನದಲ್ಲಿ ಅಳವಡಿಸಲು ಕೋರಿರುವ ಹಿನ್ನೆಲೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಅಭಿಯಂತರರು ಮೊದಲ ಆದ್ಯಾತೆಯಾಗಿ ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸುವುದಾಗಿ ತಿಳಿಸಿದರು.

Scanned with CamScanner

6. ಎ.ಇ.ಸಿ.ಎಸ್.ಬಡಾವಣೆಯ ಶ್ರೀಮತಿ.ಪೂರ್ಣಿಮ ಕಲ್ಮಟ್ ರವರು ಕಾಮಗಾರಿಯನ್ನು ಪ್ರಾರಂಭಿಸುವ ದಿನಾಂಕವನ್ನು ಈ ಸಭೆಯಲ್ಲಿ ತಿಳಿಸಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು ದಿನಾಂಕ:15–12–2020 ರಂದು ಅಥವಾ ಮುಂಚಿತವಾಗಿ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ತಿಳಿಸಿದರು.
7. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಈಗಾಗಲೇ ವೈಕುಂಠ ರಸ್ತೆಯ ಪೂಜಾ ಸ್ಟೋರ್ ಬಳಿ ನಿರ್ಮಿಸಿರುವ ಕಲ್ವರ್ಟ್‌ಗಳನ್ನು ಸರಿಪಡಿಸಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಸಹಾಯಕ ಅಭಿಯಂತರರು ವೆಂಕಟೇಶ್ ರವರು ಮಾಡುವುದಾಗಿ ತಿಳಿಸಿದರು.
8. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಎ.ಇ.ಸಿ.ಎಸ್.ಬಡಾವಣೆಯ 60 ಅಡಿ ರಸ್ತೆಯಲ್ಲಿ ನಿರ್ಮಿಸುತ್ತಿರುವ ಚರಂಡಿಯ ಬಗ್ಗೆ ಗುತ್ತಿಗೆದಾರರಿಗೆ ನೋಟಿಸ್ ನೀಡಿರುವ ಬಗ್ಗೆ ಮಾಹಿತಿ ನೀಡುವಂತೆ ಅಧ್ಯಕ್ಷರ ಬಳಿ ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸದಂತೆ ರಸ್ತೆ ಮೂಲಭೂತ ಸೌಕರ್ಯ, ಸಹಾಯಕ ಅಭಿಯಂತರರು ಶ್ರೀ.ರವಿಚಂದ್ರನ್ ರವರು ನೋಟಿಸ್ ನೀಡಿರುವ ಪ್ರತಿಯನ್ನು ಸಭೆಯಲ್ಲಿ ಸಲ್ಲಿಸಿದರು.
9. ಕುಂದಲಹಳ್ಳಿ ಕಾಲೋನಿಯ ಚಂದ್ರಾರೆಡ್ಡಿ ರವರು ಕುಂದಲಹಳ್ಳಿ ಕಾಲೋನಿಯ 6ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿಯ ಪೈಪ್‌ನ್ನು ಹೆಚ್ಚಿನ ಗಾತ್ರಕ್ಕೆ ಬದಲಿಸುವಂತೆ ಕೋರಿರುವ ಹಿನ್ನೆಲೆಯಲ್ಲಿ ಸದರಿ ವಿಷಯಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು(BWSSB), ಶ್ರೀ.ಮೀರ್ಜಾ ರವರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿದಾಗ 10ದಿನಗಳ ಗಡುವನ್ನು ಕೋರಿರುವ ಬಗ್ಗೆ ಸಹಾಯಕ ಅಭಿಯಂತರರು ಶ್ರೀ.ಎನ್.ವೆಂಕಟೇಶ್ ರವರು ಮಾಹಿತಿ ನೀಡಿದರು.
10. ಸಹಾಯಕ ಅಭಿಯಂತರರು, ಶ್ರೀ.ಸಂಜಯ್, ಬಿಬಿಎಂಪಿ ರವರು ಈಗಾಗಲೇ ಅಳವಡಿಸಿರುವ ಬೀದಿ ದೀಪಗಳನ್ನು ಸರಿಪಡಿಸಲಾಗುವುದು ಹಾಗೂ ಹೊಸದಾಗಿ ದೀಪಗಳನ್ನು ಅಳವಡಿಸುವುದು ಅನುದಾನ ನಿರೀಕ್ಷಣೆಯಲ್ಲಿರುವುದಾಗಿ ತಿಳಿಸಿದರು.
11. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿಗಳು ಶ್ರೀ.ವೆಂಕಟೇಶ್ ರವರು ರಸ್ತೆ ಬದಿಯಲ್ಲಿ ಬೀದಿಬದಿಯ ವ್ಯಾಪರಿಗಳು ತುಂಬಿರುವ ಬಗ್ಗೆ ಸದರಿಯವರನ್ನು ಕೂಡಲೇ ತೆರವುಗೊಳಿಸುವ ಬಗ್ಗೆ ಸಭೆಯಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಅಧ್ಯಕ್ಷಕರು ಸದರಿ ತೆರವು ಕಾರ್ಯವನ್ನು ತಾಂತ್ರಿಕ ವಿಭಾಗ ಮತ್ತು ಆರೋಗ್ಯ ವಿಭಾಗದವರು ಜಂಟಿಯಾಗಿ ಕಾರ್ಯನಿರ್ವಹಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ಎನ್.ವೆಂಕಟೇಶ್,ಸಹಾಯಕ ಅಭಿಯಂತರರು, ಶ್ರೀ.ರಘುನಂದನ್ ರವರಿಗೆ ದಿನಾಂಕವನ್ನು ಗೊತ್ತುಪಡಿಸಿ ತೆರವುಕಾರ್ಯವನ್ನು ಕೈಗೊಳ್ಳಲು ಸೂಚಿಸಿದರು.
12. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಎಇ.ಸಿ.ಎಸ್.ಬಡಾವಣೆಯ 60 ಅಡಿ ಮುಖ್ಯರಸ್ತೆಯಲ್ಲಿ ವಾಹನಗಳ ಪಾರ್ಕಿಂಗ್‌ಯನ್ನು ದಿನಬದಲಸಿ ಎರಡು ಕಡೆ ನಿಲ್ಲಿಸಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ಸದರಿ ವಿಷಯಕ್ಕೆ ಸಬಂಧಿಸಿದಂತೆ ಅಧ್ಯಕ್ಷರು ಡಾ||ಸುರೇಶ್ ರವರು ಕಾಮಗಾರಿಯು ಪೂರ್ಣಗೊಂಡ ನಂತರ ಸಂಚಾರಿ ಪೋಲಿಸ್ ರವರಿಗೆ ಪತ್ರ ಬರೆಯುವುದಾಗಿ ತಿಳಿಸಿದರು.

Scanned with CamScanner

13. ಸಭೆಯಲ್ಲಿ ಉಪಸ್ಥಿತರಿದ್ದ ಡಾ॥ಪ್ರಮೀಳ ರವರು ಕೋವಿಡ್-19 ಸೋಂಕು ಹೇಗೆ ಹರಡುತ್ತದೆ ಮತ್ತು ಸೋಂಕಿತರನ್ನು ಗುರುತಿಸುವ ರೋಗ ಲಕ್ಷಣಗಳ ಬಗ್ಗೆ, ತಪಾಸಣೆ ಹಾಗೂ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಹಾಗೂ ದೊಡ್ಡನೆಕ್ಕುಂದಿ ಬಡಾವಣೆಗಳಲ್ಲಿ ಸಾರ್ವಜನಿಕರು ಮುಂದೆ ಬಂದು ಪರಿಕ್ಷಿಸಿಕೊಳ್ಳಲು ಸಭೆಯಲ್ಲಿ ಇರುವ ಸದಸ್ಯರಿಗೆ ಕ್ರಮಕೈಗೊಳ್ಳಬೇಕೆಂದು ಕೋರಿದರು.

ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

5/12/2020

ಕಾರ್ಯದರ್ಶಿ
ವಾರ್ಡ್ ನಂ.85

ನೋಡಲ್ ಅಧಿಕಾರಿ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.85

Scanned with CamScanner